**ವಿಷಯ : ಬೈಲಹೊಂಗಲ ತಾಲ್ಲೂಕಿನ ಬೆಳವಾಡಿ ಗ್ರಾಮದಲ್ಲಿ ಮಂಡಲ ಗ್ರಂಥಾಲಯ ಪ್ರಾರಂಭಿಸುವ ಬಗ್ಗೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 467 (759)

ಶ್ರೀ. ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ ) :- ಮಾನ್ಯ ಗ್ರಂಥಾಲಯ ಹಾಗೂ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೂರ ಛತ್ರಪತಿ ಶಿವಾಜಿ ಹೋರಾಡಿದ ವೀರ ರಾಣಿ ಬೆಳವಡಿ ಮಲ್ಲಮ್ಮನ ಗ್ರಾಮವಾದ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಮಂಡಲ ಗ್ರಂಥಾಲಯ ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಆ) ಮಂಡಳ ಪಂಚಾಯಿತಿಯವರು ಪುಕ್ಕಟೆಯಾಗಿ ಗ್ರಂಥಾಲಯ ಪ್ರಾರಂಭಿಸಲು ಸ್ಥಳಾವಾಕಾಶ ಕೊಟ್ಟಲ್ಲಿ ಸರ್ಕಾರದವರು ಆದ್ಯತೆಯ ಮೇರೆಗೆ ಇಲ್ಲಿ ಮಂಡಲ ಗ್ರಂಥಾಲಯ ಪ್ರಾರಂಭಿಸಲು ಕ್ರಮ ಕೈಗೊಳ್ಳುವರೆ ?

ಶ್ರೀ. ಕೆ. ಶಿವಮೂರ್ತಿ ( ಗ್ರಂಥಾಲಯ ಹಾಗೂ ವಯಸ್ಕರ ಶಿಕ್ಷಣ ಸಚಿವರು ) :-

ಅ) ಗ್ರಾಮ ಪಂಚಾಯಿತಿ ಗ್ರಂಥಾಲಯವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿ ಬಂದಿದೆ.

ಆ) ಹೌದು .

**ವಿಷಯ : ರಾಜ್ಯದ ಕೆಲವು ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಉರುವಲು ಕಟ್ಟಿಗೆಯ ಅಭಾವ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 470 (687)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕೆಲವು ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಉರುವಲು ಕಟ್ಟಿಗೆಯ ಅಭಾವವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಅಭಾವವನ್ನು ತಪ್ಪಿಸಲು ಸರಕಾರವು ಅಂಥಹ ಸ್ಥಳಗಳಲ್ಲಿ ಕಟ್ಟಿಗೆ ಡಿಪೋವನ್ನು ತೆರೆಯುವ ಯೋಜನೆ ಸರಕಾರಕ್ಕೆ ಇದೆಯೇ ;

ಶ್ರೀ. ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :-

ಹೌದು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇದರ ವತಿಯಿಂದ ಶ್ರೀಯುತರಾದ ವಿ. ರಂಗನಾಥನ್ ಹಾಗೂ ಎಸ್. ಸುಬ್ಬರಾವ್ ಇವರುಗಳು ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಯನ್ಸ್, ಬೆಂಗಳೂರು ಇದರ ವತಿಯಿಂದ ಡಾ : ಡಿ.ಕೆ. ಸುಬ್ರಹ್ಮಣ್ಯಂ ಇವರು ಕರ್ನಾಟಕ ರಾಜ್ಯದಲ್ಲಿ ಉರುವಲು ಕಟ್ಟಿಗೆಯ ಬೇಡಿಕೆಯ ಬಗ್ಗೆ

ಅಧ್ಯಯವನ್ನು ನಡೆಸಿರುತ್ತಾರೆ. ಅವರು ನಡೆಸಿದ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 21.58 ಮಿಲಿಯನ್ ಟನ್‌ಗಳಷ್ಟು ಉರುವಲು ಕಟ್ಟಿಗೆಯ ಅವಶ್ಯಕತೆ ಇರುತ್ತದೆ. ಇದರಲ್ಲಿ ರಾಜ್ಯದ ಅರಣ್ಯಗಳಿಂದ ಸುಮಾರು 10.65 ಮಿಲಿಯನ್ ಟನ್‌ಗಳಷ್ಟು ಮಾತ್ರ ಉರುವಲು ಕಟ್ಟಿಗೆಯು ಪೂರೈಕೆಯಾಗುತ್ತಿದೆ. ಬಾಕಿ ಉಳಿದ ಅವಶ್ಯಕತೆಯನ್ನು ಖಾಸಗೀ ಮತ್ತು ವ್ಯವಸಾಯ ಜಮೀನುಗಳಿಂದ ಪೂರೈಕೆಯಾಗುತ್ತಿದೆ.

ಆ) ಎಲ್ಲ ಹಳ್ಳಿಗಳಲ್ಲೂ ಅರಣ್ಯ ಇಲಾಖೆಯ ಸೌದೆ ಡಿಪೋಗಳನ್ನು ತೆಗೆಯುವುದು, ಕಾರ್ಯಸಾಧ್ಯವಿಲ್ಲ. ಅದರೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ರಾಜ್ಯದೆಲ್ಲೆಡೆ ಸೌದೆ ಡಿಪೋಗಳನ್ನು ತೆರೆದಿದ್ದು, ಸಾರ್ವಜನಿಕರಿಗೆ ಉರುವಲು ಕಟ್ಟಿಗೆಯನ್ನು ಸರಬರಾಜು ಮಾಡುತ್ತಿದೆ. ಇದರ ಜೊತೆಗೆ ಉರುವಲು ಕಟ್ಟಿಗೆಯ ಅಭಾವವನ್ನು ದೂರಮಾಡಲು ಸರ್ಕಾರವು ಉರುವಲು ಕಟ್ಟಿಗೆ ಉತ್ಪಾದನೆಯಾಗುವಂತಹ ನೆಡುತೋಪುಗಳನ್ನು ವಿವಿಧ ಯೋಜನೆಗಳ ಅಡಿಯಲ್ಲಿ ಬೆಳೆಸಲಾಗುತ್ತಿದೆ. ಈವರೆವಿಗೆ 6,67,563 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಉರುವಲು ಕಟ್ಟಿಗೆಯ ನೆಡುತೋಪುಗಳನ್ನು ಬೆಳೆಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಅರಣ್ಯ ಬೆಳೆಸುವುದನ್ನು ಉತ್ತೇಜಿಸುವುದರ ಮೂಲಕ ಹಾಗೂ ಗೋಬರ್‌ಗ್ಯಾಸ್ ಸೀಮೆಎಣ್ಣೆ, ಸೂರ್ಯಕಿರಣ ಬಳಕೆ, ಹೊಗೆರಹಿತ ಒಲೆಗಳು ಮುಂತಾದ ಪರ್ಯಾಯ ವ್ಯವಸ್ಥೆಗಳ ಮೂಲಕ ಇಂಧನವನ್ನು ಹೆಚ್ಚಿಸಿ ಗ್ರಾಮಾಂತರ ಪ್ರದೇಶದ ಜನರ ಉರುವಲು ಕಟ್ಟಿಗೆಯ ಬೇಡಿಕೆಯನ್ನು ಪೂರೈಸುವ ಕಾರ್ಯಕ್ರಮವನ್ನು ಸರ್ಕಾರವು ಯೋಜಿಸಿದೆ.

**ವಿಷಯ : ಕಳ್ಳಂಬೆಳ್ಳದಲ್ಲಿನ ಪ್ರಸೂತಿ ಗೃಹಕ್ಕೆ ವೈದ್ಯರು ಮತ್ತು ಸಿಬ್ಬಂದಿ ಮಂಜೂರಾತಿ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 472(635)

ಶ್ರೀ. ಟಿ. ಬಿ. ಜಯಚಂದ್ರ, (ಕಳ್ಳಂಬೆಳ್ಳ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಕಳ್ಳಂಬೆಳ್ಳದಲ್ಲಿ ಪ್ರಸೂತಿ ಗೃಹ ಮಂಜೂರಾಗಿದ್ದು ಇದುವರೆವಿಗೂ ವೈದ್ಯರು ಮತ್ತು ಹೆಚ್ಚುವರಿ ಸಿಬ್ಬಂದಿ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2. ಪ್ರಸೂತಿ ಗೃಹ ಸ್ವತಂತ್ರ ನಿರ್ವಹಣೆಗಾಗಿ ಹಾಲಿ ಹಳೆ ಕಟ್ಟಡದಲ್ಲಿ ಸ್ಥಳಾಂತರಿಸಿದ್ದು, ಇದರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಇದುವರೆವಿಗೂ ಹುದ್ದೆಗಳನ್ನು ಮಂಜೂರು ಮಾಡದೇ ಇರಲು ಕಾರಣವೇನು ?

3. ಈ ಬಗ್ಗೆ ಸರ್ಕಾರ - ಕೂಡಲೇ ಕ್ರಮ ಕೈಗೊಳ್ಳುವುದೇ ?

ಡಾ : ಎ. ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ) :-